2017 ಕ.ತೀ.ವ 1093

(ಕಲಬುರಗಿ ನ್ಯಾಯಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ

ನಾಗಪ್ಪ -ವಿರುದ್ಧ- ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆಯ 374(2)ನೇ ಪ್ರಕರಣದಡಿಯಲ್ಲಿ ಕ್ರಿಮಿನಲ್ ಅಪೀಲು.

ಭಾರತ ದಂಡ ಸಂಹಿತೆ 302ನೇ ಪ್ರಕರಣ.

ಅಧಿವಿಚಾರಣಾ ನ್ಯಾಯಾಲಯವು, ಮರಣ ಕಾಲೀನ ಹೇಳಿಕೆಯನ್ನು ಅಂಗೀಕರಿಸುವಾಗ ಹೇಳಿಕೆ ನೀಡುವವರು ಉತ್ತಮ ಮಾನಸಿಕ ಸ್ಥಿತಿಯನ್ನು ಹೊಂದಿದ್ದಾರೆಯೆ ಎಂಬ ಪ್ರಮಾಣಪತ್ರವನ್ನು ವೈದ್ಯಾಧಿಕಾರಿ ನೀಡದೆ ಇರುವ ಸಂದರ್ಭದಲ್ಲಿ ಅದನ್ನು ಅಂಗೀಕರಿಸಿರುವುದು ನ್ಯಾಯ ಸಮ್ಮತವಲ್ಲ ಹಾಗೂ ಮೃತಳ ಹೆಬ್ಬೆಟ್ಟಿನ ಗುರುತು, ತನಿಖಾಧಿಕಾರಿ ಹಾಗೂ ವೈದ್ಯಾಧಿಕಾರಿಯ ಸಹಿಗಳಿರುವ ಮಾತ್ರದಿಂದಲೇ ಅದನ್ನು ಅಂಗೀಕರಿಸಿ ನೀಡಿರುವ ತೀರ್ಪು ಮತ್ತು ಶಿಕ್ಷೆಯ ವಿರುದ್ಧ ಈ ಅಪೀಲನ್ನು ಸಲ್ಲಿಸಿದ್ದಾರೆ.

ನ್ಯಾಯಾಲಯದ ಭರವಸೆಯನ್ನು ಹುಟ್ಟಿಸಬೇಕು ಮತ್ತು ಯಾವ ರೀತಿಯಲ್ಲಿ ಅಥವಾ ನಮೂನೆಯಲ್ಲಿ ಇದನ್ನು ದಾಖಲಿಸಬೇಕೋ, ಆ ದಾಖಲೆಯ ಸಂಬಂಧ ನಿಯಮ ಕಠಿಣವಾಗಿದ್ದರೂ ಮತ್ತು ಬಿಗಿಯಾಗಿದ್ದರೂ ಮೃತನು, ಸರಿಯಾದ ಮನಃಸ್ಥಿತಿಯಿರುವಾಗ ಹೇಳಿಕೆಯನ್ನು ನೀಡಿದ್ದಾನೆಂಬುದನ್ನು ಮರಣೋನ್ಮುಖ ಹೇಳಿಕೆಯು ಸೂಚಿಸಬೇಕು ಮತ್ತು ಮೆಡಿಕಲ್ ಪ್ರಾಕ್ಟೀಷನರ್‌ರು ಅದನ್ನು ಪ್ರಮಾಣೀಕರಿಸಿರಲೇಬೇಕು. ಇದೊಂದು ಎಚ್ಚರಿಕೆಯ ನಿಯಮವಾಗಿದ್ದು, ಇದನ್ನು ಸಾಮಾನ್ಯವಾಗಿ ಅನುಸರಿಸಬೇಕು ಮತ್ತು ಅಂಥ ಪ್ರಮಾಣೀಕರಣವಿಲ್ಲದೆ ಹೇಳಿಕೆಯನ್ನು ದಾಖಲಿಸಲಾಗಿದೆಯೇ ಎಂಬ ಬಗ್ಗೆ

*ಕ್ರಿಮಿನಲ್ ಅಪೀಲು ಸಂ: 3770/2010, ದಿನಾಂಕ: 4ನೇ ಜುಲೈ, 2016.

ಸಂದೇಹಗಳು ಉದ್ಭವಿಸಿದಾಗ ಮತ್ತು ಯಾವ ಮುಖ್ಯ ಸಾಕ್ಷ್ಯದ ಆಧಾರದ ಮೇಲೆ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ರುಜುವಾತುಪಡಿಸಲಾಗಿದೆಯೋ ಅದನ್ನು ನ್ಯಾಯಾಲಯವು ಅತೀ ಹೆಚ್ಚಿನ ಜಾಗರೂಕತೆಯಿಂದ ಮುಂದುವರಿಸಬೇಕು ಎಂದು ನಿವೇದಿಸಿದ್ದಾರೆ.

*ಲಕ್ಷ್ಮಣ್ –ವಿರುದ್ಧ– ಮಹಾರಾಷ್ಟ್ರ ರಾಜ್ಯದ* ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಮರಣಕಾಲೀನ ಹೇಳಿಕೆಯನ್ನು ಅಗತ್ಯವಾಗಿ ಮ್ಯಾಜಿಸ್ಟ್ರೇಟರು ಮಾಡಲೇಬೇಕು ಎನ್ನುವುದು ಕಾನೂನಿನಲ್ಲಿ ಅಗತ್ಯವಾಗಿಲ್ಲವೆಂದು ಅಭಿಪ್ರಾಯಪಟ್ಟಿದೆ, ಮತ್ತು ಅಂಥ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರು ದಾಖಲಿಸುವಾಗ, ಅಂಥ ದಾಖಲಾತಿಗೆ ನಿಯಮಿಸಲಾದ ಯಾವುದೇ ನಿರ್ದಿಷ್ಟಪಡಿಸಿದ ಶಾಸನಬದ್ಧ ನಮೂನೆಯಿರುವುದಿಲ್ಲ. ತತ್ಪರಿಣಾಮವಾಗಿ ಅಂಥ ಹೇಳಿಕೆಗೆ ಯಾವ ಸಾಕ್ಷಿಯ ವಾದ ಮೌಲ್ಯ ಅಥವಾ ಪ್ರಾಮುಖ್ಯತೆಯನ್ನು ಅಗತ್ಯವಾಗಿ ಸೇರಿಸಬೇಕಾಗುತ್ತದೆ ಎಂಬುದು ಪ್ರತಿಯೊಂದು ನಿರ್ದಿಷ್ಟ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಆಧರಿಸಿರುತ್ತವೆ. ಮರಣಕಾಲೀನ ಹೇಳಿಕೆಯನ್ನು ದಾಖಲಿಸುವ ವ್ಯಕ್ತಿಯು, ಮೃತನು, ಸರಿಯಾದ ಮನಸ್ಥಿತಿಯನ್ನು ಹೊಂದಿದ್ದನೆಂಬುದನ್ನು ಮನವರಿಕೆ ಮಾಡಿಕೊಡಲೇಬೇಕು ಎಂಬುದನ್ನು ಅವಶ್ಯವಾಗಿ ಅಗತ್ಯಪಡಿಸಲಾಗಿದೆ. ವೈದ್ಯರು ಪರೀಕ್ಷೆಯನ್ನು ಮಾಡದಿದ್ದರೂ ಕೂಡ ಘೋಷಿತನು ವಿವರಣೆಯನ್ನು ಮಾಡಲು ಸೂಕ್ತನಾಗಿರುವನು ಎಂಬುದನ್ನು ಮ್ಯಾಜಿಸ್ಟ್ರೇಟರ ಸಾಕ್ಷ್ಯವು ರುಜುವಾತುಪಡಿಸಿದಲ್ಲಿ, ಹೇಳಿಕೆಯ ಅನುಸಾರ ಕಾರ್ಯನಿರ್ವಹಿಸಬಹುದು, ನ್ಯಾಯಾಲಯ ಒದಗಿಸಿರುವುದು ಅಂತಿಮವಾಗಿ, ಅದು ಸ್ವಯಂ ಮತ್ತು ಸತ್ಯ ಪೂರ್ಣವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ವೈದ್ಯರ ಪ್ರಮಾಣೀಕರಣವು, ಅವಶ್ಯವಾಗಿ ಎಚ್ಚರಿಕೆಯ ನಿಯಮವಾಗಿರುತ್ತದೆ ಮತ್ತು ಆದುದರಿಂದ ಹೇಳಿಕೆಯ ಸ್ವ–ಇಚ್ಛೆಯ ಮತ್ತು ಸತ್ಯ ಪೂರ್ಣವಾದ ಸ್ವಭಾವವನ್ನು ಅನ್ಯಥಾವಾಗಿಯೂ ರುಜುವಾತು ಪಡಿಸಬಹುದಾಗಿದೆ.

ಅಧೀನ ನ್ಯಾಯಾಲಯವು, ಮರಣಕಾಲೀನ ಹೇಳಿಕೆಯನ್ನು ನೀಡುತ್ತಿರುವಾಗ, ಮೃತಳು ಉತ್ತಮ ಮನಸ್ಥಿತಿಯಲ್ಲಿದ್ದಳೆಂಬುದನ್ನು ಪ್ರಮಾಣೀಕರಣದ ಮೂಲಕ ಇದನ್ನು ಮೊದಲು ಸೂಚಿಸಿಲ್ಲದಿದ್ದಾಗ ಮರಣಕಾಲೀನ ಹೇಳಿಕೆಯನ್ನು ಅವಲಂಬಿಸಿರುವುದು ನ್ಯಾಯಸಮ್ಮತವಾಗಿದೆಯೇ, ಸಮರ್ಥಿಸಿಕೊಂಡಿದೆಯೇ ಎಂದು ನಾವು ತಿಳಿಸಬೇಕಾಗಿರುವುದನ್ನು ಅಗತ್ಯಪಡಿಸುವುದು ಮಾತ್ರ ವಿವಾದಾಂಶವಾಗಿದೆ. *ಲಕ್ಷ್ಮಣ್*ರವರ ಪ್ರಕರಣದಲ್ಲಿ (ಮೇಲಿನ), ಸಾಂವಿಧಾನಿಕ ಪೀಠವು ವಿಧಿಸಲಾದ

**ಮಾರ್ಗಸೂಚಿಗಳನ್ನು ನೀಡಿದ್ದು, ಪ್ರಕರಣದ ಸನ್ನಿವೇಶವನ್ನು ನೀಡಿದ ಮರಣಕಾಲೀನ ಹೇಳಿಕೆಯ ನೈಜತೆಯ ಬಗ್ಗೆ ನಮಗೆ ಮನವರಿಕೆಯಾಗಿರುತ್ತದೆ. ಆದುದರಿಂದ, ಮರಣಕಾಲೀನ ಹೇಳಿಕೆಯನ್ನು ಅಂಗೀಕರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದಿಂದ ಯಾವುದೇ ಅಸ್ಥಿರತೆ ಅಥವಾ ಅಕ್ರಮ ನಡೆದಿರುವುದಿಲ್ಲ ಎಂದು ಅಭಿಪ್ರಾಯಪಟ್ಟು ಈ ಕ್ರಿಮಿನಲ್ ಅಪೀಲನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. (2014)4 ಎಸ್‌ಸಿಸಿ 583)*
*ಗುಲ್ಜಾರಿ ಲಾಲ್ -ವಿರುದ್ಧ- ಹರಿಯಾಣ ರಾಜ್ಯ (ಉಲ್ಲೇ) 8*

*2. [(2002)6 ಎಸ್‌ಸಿಸಿ 710]*
*ಲಕ್ಷ್ಮಣ್ -ವಿರುದ್ಧ- ಮಹಾರಾಷ್ಟ್ರ ರಾಜ್ಯ (ಉಲ್ಲೇ) 8*

ಅಪೀಲುದಾರರ ಪರವಾಗಿ: ಶ್ರೀ ಶಿವಾನಂದ್ ವಿ. ಪಟ್ಟಣಶೆಟ್ಟಿ, ವಕೀಲರು; ಪ್ರತ್ಯಪೀಲುದಾರರ ಪರವಾಗಿ: ಶ್ರೀ ನಾಡಗೌಡ, ಎಎಜಿ ಶ್ರೀ ಶಿವಪುತ್ರ ಎಸ್. ಉದ್ಬಾಲ್ಕರ್, ಎಚ್‌ಸಿಜಿಪಿ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮತ್ತು ಅಡಿಷನಲ್ ಅಡ್ವೋಕೇಟ್ ಜನರಲ್‌ರವರ ವಾದವನ್ನು ಆಲಿಸಲಾಗಿದೆ.

2. ಮೊಕದ್ದಮೆಯ ಸಂಗತಿಗಳು ಈ ಮುಂದಿನಂತಿವೆ:

ಅಪೀಲುದಾರನು ಈ ಮುಂದಿನ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅಧೀನ ನ್ಯಾಯಾಲಯದ ಮುಂದೆ ಆಪಾದಿತನಾಗಿದ್ದನು. ಅಪೀಲುದಾರನಿಗೆ, ದೂರುದಾರ–ಮೃತ ಗಂದ್ರಾಬಾಯಿರವರೊಂದಿಗೆ ಸಂಬಂಧವಿತ್ತೆಂದು ಹೇಳಲಾಗಿದೆ. ಆಪಾದಿತನು, ನಿಂಬಾಳ ಗ್ರಾಮದಲ್ಲಿ ಸುಮಾರು ರಾತ್ರಿ 9.00 ಗಂಟೆಯಲ್ಲಿ 24ನೇ ಏಪ್ರಿಲ್

2008ರಂದು ಗಂದ್ರಾಬಾಯಿಯ ಬಳಿಗೆ ಬಂದಿದ್ದ ಲಾಲ್‌ಸಾಬ್ ಮುಲ್‌ನನ್ನು ನೋಡಿದ್ದನು ಮತ್ತು ಆಪಾದಿತನು ಕೋಪಗೊಂಡಿದ್ದನು ಮತ್ತು ಲಾಲ್‌ಸಾಬ್ ಮುಲ್ಲನೊಂದಿಗೆ ಆಕೆ ಸಂಬಂಧವಿಟ್ಟುಕೊಂಡಿರುವಳೆಂದು, ದೂರುದಾರಳ ಬಗ್ಗೆ ಸಂದೇಹ ಪಟ್ಟಿದ್ದನು ಎಂಬುದು ಗೊತ್ತಾಗುತ್ತದೆ. ಇಷ್ಟೇ ಅಲ್ಲದೆ, ಅವನು ಕೂಡಲೇ ದೂರುದಾರಳ ಬಳಿಗೆ ಹೋಗಿ ಅವಳೊಂದಿಗೆ ಜಗಳ ತೆಗೆದಿದ್ದನೆಂಬುದು ಸಹ ಗೊತ್ತಾಗುತ್ತದೆ ಮತ್ತು ಆಪಾದಿತನು, ಲಾಲ್‌ಸಾಬ್ ಮುಲ್‌ನೊಂದಿಗೆ ಸಂಬಂಧ ಹೊಂದಿರುವಳೆಂದು ಅವಳ ಮೇಲೆ ಸೀಮೆಎಣ್ಣೆಯನ್ನು ಸುರಿದು ಬೆಂಕಿ ಹಚ್ಚಿರುವುದು ಗೊತ್ತಾಗುತ್ತದೆ. ಅವಳನ್ನು ಮಾರನೇ ದಿನ ಸುಮಾರು ಮಧ್ಯಾಹ್ನ 2.30 ಗಂಟೆಗೆ ಅಷ್ಟೇ ಆಸ್ಪತ್ರೆಗೆ ಸೇರಿಸಲಾಗಿತ್ತು. ದೂರುದಾರ ಗಂದ್ರಾಬಾಯಿ ಸಿದ್ರಾಮ್ ಬಡಿಗೇರ್, ನಿಂಬಾಲ ಗ್ರಾಮದ ನಿವಾಸಿಯಾಗಿದ್ದಳು. ಆಕೆ, ತನ್ನ ಗಂಡನು ತನ್ನ ಪತಿನಿಷ್ಠೆಯನ್ನು ಸಂದೇಹಪಡುತ್ತಿದ್ದುದರಿಂದ ಗಂಡನನ್ನು ತ್ಯಜಿಸಿದ್ದಳು; ಅವಳು ಸದರಿ ವಿವಾಹದಿಂದ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನನ್ನು ಹೊಂದಿದ್ದಳು. ಅವರು ಎಲ್ಲರೂ ಅವಳ ಪತಿಯೊಂದಿಗೆ ವಾಸವಾಗಿದ್ದರು. ತನ್ನ ಪತಿಯು ಮೃತನಾಗಿರುವನೆಂದು ಇಬ್ಬರು ಹೆಣ್ಣು ಮಕ್ಕಳು ಮೃತರಾಗಿರುವರೆಂದು ಹೇಳಲಾಗಿತ್ತು. ತದನಂತರ, ಅವಳು ನಿಂಬಾಳ್ ಗ್ರಾಮದ ಧರೆಪ್ಪ ಬಿರಾದಾರ್ ಎಂಬುವವನೊಂದಿಗೆ ಸಂಬಂಧ ಬೆಳೆಸಿಕೊಂಡಿದ್ದಳು ನಂತರದಲ್ಲಿ, ಧರೆಪ್ಪ ಬಿರಾದಾರನು ಸಹ ಮೃತನಾಗಿದ್ದು, ಆ ತರುವಾಯ ದೂರುದಾರಳು ಆಪಾದಿತ ನಾಗಪ್ಪ ವಡ್ಡರರೊಂದಿಗೆ ಸಂಬಂಧ ಬೆಳೆಸಿದ್ದಳು.

3. ಈ ಹಿನ್ನೆಲೆಯಲ್ಲಿ, ದೂರುದಾರಳ ಪ್ರಕಾರ, ಕೂಲಿ ಕೆಲಸದ ಸಂಬಂಧ ಅವಳನ್ನು ವಿಚಾರಿಸಲು ಬಂದಿದ್ದ ಲಾಲ್ ಸಾಬ್ ಮುಲ್‌ನನ್ನು ಆಪಾದಿತನು ನೋಡಿದ್ದನು ಎಂಬುದು ಗೊತ್ತಾಗುತ್ತದೆ, ಆಪಾದಿತನು, ದೂರುದಾರಳು ಮತ್ತು ಲಾಲ್‌ಸಾಬ್ ಮುಲ್‌ರ ನಡುವೆ ಅಕ್ರಮ ಸಂಬಂಧವಿರುವುದೆಂದು ಘಟನೆಯನ್ನು ತಪ್ಪಾಗಿ ತಿಳಿದಿದ್ದಾನೆ, ಆದುದರಿಂದ 24ನೇ ಏಪ್ರಿಲ್ 2008ರ ರಾತ್ರಿ ಸುಮಾರು 9.00 ಗಂಟೆಗೆ ಅವಳಿಗೆ ಬೆಂಕಿ ಹಚ್ಚಿದ್ದಾನೆ.

4. ಇದರ ಪರಿಣಾಮವಾಗಿ, ದೂರುದಾರಳ ಮುಖ, ಬೆನ್ನು ಮತ್ತು ಕಾಲುಗಳಿಗೆ ಗಾಯಗಳುಂಟಾಗಿವೆ. ಬಾಬು ಬಿರಾದಾರ್ ಎಂಬೊಬ್ಬ ಮತ್ತು ನಬಿ ಇನಾಮ್‌ದಾರ್

ಸೇರಿ ಅವಳನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ತದನಂತರ, ಘಟನೆಯ ಮಾಹಿತಿಯನ್ನು ತಿಳಿದ ನಂತರ, ಪೊಲೀಸ್ ಅಧಿಕಾರಿ–ಪ್ರಾ.ಸಾ.16, ಇವರು ಯಾವ ರೀತಿಯಲ್ಲಿ ಘಟನೆ ನಡೆಯಿತೆಂಬ ಬಗ್ಗೆ, ಹೇಳಿಕೆಯನ್ನು ದಾಖಲಿಸಿದ್ದು, ಇದನ್ನು ಅವಳಿಗೆ ಚಿಕಿತ್ಸೆ ನೀಡಿದ್ದ ಮೆಡಿಕಲ್ ಪ್ರಾಕ್ಟೀಷನರ್ ರವರು ಯುಕ್ತವಾಗಿ ಪ್ರಮಾಣೀಕರಿಸಿದ್ದಾರೆ, ತದನಂತರ ಶೇ.80ರಷ್ಟು ಸುಟ್ಟಗಾಯಗಳಿಂದ ಬಳಲುತ್ತಿದ್ದ ಗಂದ್ರಾಬಾಯಿಗೆ, ಸುಟ್ಟಗಾಯಗಳಾಗಿದ್ದವೆಂದು ಹೇಳಲಾಗಿದೆ. ಸದರಿ ದೂರಿನ ಆಧಾರದ ಮೇಲೆ ಇದನ್ನು ಮರಣೋತ್ತರ ಹೇಳಿಕೆಯೆಂದು ಪರಿಭಾವಿಸಲಾಗಿದ್ದು, ಆ ಆಪಾದಿತನನ್ನು ಬಂಧಿಸಲಾಗಿದ್ದು, ಹೆಚ್ಚಿನ ವ್ಯವಹರಣೆಗಳ ನಂತರ, ಸೆಷನ್ಸ್ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ಒಪ್ಪಿಸಿದ ನಂತರ, ಅವನ ವಿರುದ್ಧ ಆರೋಪಗಳನ್ನು ರೂಪಿಸಲಾಯಿತು. ಇದಕ್ಕೆ ಅವನು ತಪ್ಪಿತಸ್ಥನಲ್ಲವೆಂದು ವಾದಿಸಿದ್ದು, ಅಧಿವಿಚಾರಣೆ ಮಾಡಬೇಕೆಂದು ಕ್ಲೇಮು ಮಾಡಲಾಗಿದ್ದು, ಆಗ ಪ್ರಾಸಿಕ್ಯೂಷನ್ನು, 33 ಜನ ಸಾಕ್ಷಿದಾರರನ್ನು ಪರಿಶೀಲಿಸಿದ್ದು, ಕೆಲವು ನಿಶಾನೆಗಳನ್ನು ಮತ್ತು ಮುದ್ದೆಮಾಲುಗಳನ್ನು ಗುರುತು ಮಾಡಿದ್ದು, ಇದರ ಆಧಾರದ ಮೇಲೆ ಅಧೀನ ನ್ಯಾಯಾಲಯವು ಪರಿಗಣನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ.

1. ಪ್ರಾಸಿಕ್ಯೂಷನ್ನು, ಮೃತ ಗಂದ್ರಾಬಾಯಿಯು, ಆಪಾದಿತನೊಂದಿಗೆ ಅಕ್ರಮ ಸಂಬಂಧವನ್ನು ಹೊಂದಿದ್ದು, ಆಪಾದಿತನು, ಆಪರಾಧಿಕ ಸಾಕ್ಷ್ಯ.18 ಲಾಲ್‌ಸಾಬ್ ಮುಲ್ಲಾನು ಮೃತರ ಮನೆಗೆ ಹೋಗಿದ್ದನೆಂದು, ಮೃತರು ಪ್ರಾ.ಸಾ.18ರ ಜೊತೆ ಅಕ್ರಮ ಸಂಬಂಧ ಹೊಂದಿರುವಳೆಂದು ಸಂದೇಹಪಟ್ಟುಕೊಂಡು, ಆಪಾದಿತನು, ದಿನಾಂಕ 24.4.2008 ರಂದು ಸುಮಾರು ರಾತ್ರಿ 21.00 ಗಂಟೆಗೆ ನಿಂಬಾಲದಲ್ಲಿರುವ ಮೃತ ಗಂದ್ರಾಬಾಯಿಯ ಮನೆಯಲ್ಲಿ ಅವಳ ಮೇಲೆ ಸೀಮೆಎಣ್ಣೆಯನ್ನು ಸುರಿದು ಬೆಂಕಿಯನ್ನು ಹಚ್ಚಿ ಗಂದ್ರಾಬಾಯಿಯ ಮರಣಕ್ಕೆ ಉದ್ದೇಶಪೂರ್ವಕವಾಗಿ ಕಾರಣನಾಗಿ ಕೊಲೆಯನ್ನು ಮಾಡಿದ್ದಾನೆ ಆ ಮೂಲಕ ಭಾರತೀಯ ದಂಡ ಸಂಹಿತೆಯ 302ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಎಸಗಿರುವನು ಎಂಬ ಎಲ್ಲಾ ಯುಕ್ತ ಸಂದೇಹಗಳನ್ನು ರುಜುವಾತುಪಡಿಸಿದೆಯೇ?

5. ಅಧೀನ ನ್ಯಾಯಾಲಯವು, ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದ್ದು, 5,000/– ರೂ. ಜುಲ್ಮಾನೆಯೊಂದಿಗೆ ಜೀವಾವಧಿ ಕಾರಾವಾಸ ಶಿಕ್ಷೆಗೆ ಅಪೀಲುದಾರನನ್ನು ಅಪರಾಧಿಯೆಂದು ನಿರ್ಣಯಿಸಿದೆ. ಇದನ್ನು, ಪ್ರಸ್ತುತ ಅಪೀಲಿನಲ್ಲಿ ಪ್ರಶ್ನಿಸಲಾಗಿದೆ.

6. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಎಲ್ಲಾ ಸಾಕ್ಷಿದಾರರು ಪ್ರತಿಕೂಲವಾಗಿ ಪರಿವರ್ತಿತರಾಗಿದ್ದಾರೆ ಮತ್ತು ಅಧಿಕೃತ ಸಾಕ್ಷಿದಾರರಾದ ಪ್ರಾಸಾ.14, ಚಿಕಿತ್ಸೆ ನೀಡಿರುವ ವೈದ್ಯಕೀಯ ಅಧಿಕಾರಿ, ಪ್ರಾಸಾ.16 ತನಿಖಾಧಿಕಾರಿ; ಮತ್ತು ದೇಹದ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿರುವ, ಪ್ರಾಸಾ.19 ವೈದ್ಯಕೀಯ ಅಧಿಕಾರಿ, ಇವರು ಮಾತ್ರ ಪ್ರಾಸಿಕ್ಯೂಷನ್‌ನ ಮೊಕದ್ದಮೆಯನ್ನು ಬೆಂಬಲಿಸಿದ್ದಾರೆ. ಇವರನ್ನು ಹೊರತುಪಡಿಸಿದ ಪ್ರಾಸಿಕ್ಯೂಷನ್‌ನ ಮೊಕದ್ದಮೆಯನ್ನು ಬೇರೆ ಯಾರೂ ಬೆಂಬಲಿಸಿಲ್ಲ. ಆದುದರಿಂದ, ಮರಣಕಾಲೀನ ಹೇಳಿಕೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವು ವಿಧಿಸಲಾದಂಥ ಕಾನೂನು, ಏನನ್ನು ತಿಳಿಸುತ್ತದೆ ಎಂದರೆ, ನ್ಯಾಯಾಲಯದ ಭರವಸೆಯನ್ನು ಹುಟ್ಟಿಸಬೇಕು ಮತ್ತು ಯಾವ ರೀತಿಯಲ್ಲಿ ಅಥವಾ ನಮೂನೆಯಲ್ಲಿ ಇದನ್ನು ದಾಖಲಿಸಬೇಕೋ, ಆ ದಾಖಲೆಯ ಸಂಬಂಧ ನಿಯಮ ಕಠಿಣವಾಗಿದ್ದರೂ ಮತ್ತು ಬಿಗಿಯಾಗಿದ್ದರೂ ಮೃತನು, ಸರಿಯಾದ ಮನಃಸ್ಥಿತಿಯಿರುವಾಗ ಹೇಳಿಕೆಯನ್ನು ನೀಡಿದ್ದಾನೆಂಬುದನ್ನು ಮರಣೋನ್ಮುಖ ಹೇಳಿಕೆಯು ಸೂಚಿಸಬೇಕು ಮತ್ತು ಮೆಡಿಕಲ್ ಪ್ರಾಕ್ಟೀಷನರ್‌ರು ಅದನ್ನು ಪ್ರಮಾಣೀಕರಿಸಿರಲೇಬೇಕು. ಇದೊಂದು ಎಚ್ಚರಿಕೆಯ ನಿಯಮವಾಗಿದ್ದು, ಇದನ್ನು ಸಾಮಾನ್ಯವಾಗಿ ಅನುಸರಿಸಬೇಕು ಮತ್ತು ಅಂಥ ಪ್ರಮಾಣೀಕರಣವಿಲ್ಲದೆ ಹೇಳಿಕೆಯನ್ನು ದಾಖಲಿಸಲಾಗಿದೆಯೇ ಎಂಬ ಬಗ್ಗೆ ಸಂದೇಹಗಳು ಉದ್ಭವಿಸಿದಾಗ ಮತ್ತು ಯಾವ ಮುಖ್ಯ ಸಾಕ್ಷ್ಯದ ಆಧಾರದ ಮೇಲೆ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ರುಜುವಾತುಪಡಿಸಲಾಗಿದೆಯೋ ಅದನ್ನು ನ್ಯಾಯಾಲಯವು ಅತೀ ಹೆಚ್ಚಿನ ಜಾಗರೂಕತೆಯಿಂದ ಮುಂದುವರಿಸಬೇಕು ಎಂದು ನಿವೇದಿಸಿದ್ದಾರೆ.

7. ಪ್ರಸ್ತುತ ಪ್ರಕರಣದಲ್ಲಿ, ಮರಣಕಾಲೀನ ಹೇಳಿಕೆಯನ್ನು ನೀಡಲು ಮೃತಳ ಮನಃಸ್ಥಿತಿ ಸೂಕ್ತವಾಗಿತ್ತು ಎಂದು ಪರಿಭಾವಿಸಬಹುದಾಗಿದೆಯೆನ್ನುವ ಸಂಬಂಧ

ಮೆಡಿಕಲ್ ಪ್ರಾಕ್ಟೀಷನರ್‌ನು ನೀಡಿದ್ದ ಹಿಂಬರಹ ಇತ್ತೆಂಬುದು ಇಲ್ಲಿ ಕಂಡು ಬರುವುದಿಲ್ಲ ಮತ್ತು, ಮೆಡಿಕಲ್ ಪ್ರಾಕ್ಟೀಷನರ್‌ನು ಮರಣಕಾಲೀನ ಹೇಳಿಕೆಯ ದಾಖಲೆಯಲ್ಲಿ ಇರುವ ಸಹಿ ಮಾತ್ರದಿಂದಲೆ, ಅವಳು ಶೇಕಡಾ 80 ರಷ್ಟು ಸುಟ್ಟಗಾಯಗಳಿದ್ದಾಗ ವಿಶೇಷವಾಗಿ ಮೃತಳ ಮನಃಸ್ಥಿತಿ ಸರಿಯಾಗಿತ್ತೆ ಎಂಬ ಬಗೆಗಿನ ಪರೀಕ್ಷೆಯನ್ನು ಮನದಟ್ಟು ಮಾಡಿಕೊಳ್ಳಲು ಸಹಿಯಷ್ಟೆ ಸಾಕಾಗುವುದಿಲ್ಲ. ಮೃತಳಿಗೆ ಆಗಿದ್ದ ಸುಟ್ಟಗಾಯಗಳ ಶೇಕಡಾವಾರಿನ ಬಗ್ಗೆ ಯಾವುದೇ ನಿಖರತೆ ಇರುವುದಿಲ್ಲವೆಂಬುದನ್ನು ತೋರಿಸಲಾಗಿದ್ದು, ಇದರಲ್ಲಿ, ಪ್ರಾಸಾ.19 ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ್ದ ಮೆಡಿಕಲ್ ಆಫೀಸರ್‌ನು ಮತ್ತು ಅವಳಿಗೆ ಶೇಕಡಾ 95ರಷ್ಟು ಸುಟ್ಟಗಾಯಗಳು ಆಗಿದ್ದುದನ್ನು ತಿಳಿಸಿರುವುದರಿಂದ ಅವಳಿಗೆ ಶೇಕಡ 80 ರಷ್ಟು ಗಾಯಗಳಾಗಿದ್ದವು ಎಂದು ತಿಳಿಸಿರುವ ಪ್ರಾಸಾ.14 ಎಂದು ಪರೀಕ್ಷಿಸಲಾಗಿದ್ದ ವೈದ್ಯಕೀಯ ಅಧಿಕಾರಿಯ ಪ್ರಮಾಣೀಕರಣವು ಅಸಮಂಜಸವಾಗಿದೆ. ಆದುದರಿಂದ, ಅಸಂಗತತೆಯನ್ನು, ಮೃತಳು ನೀಡಿದ ಹೇಳಿಕೆಯು ಮನಸ್ಥಿತಿ ಸರಿಯಿರುವಾಗ ನೀಡಿರುವನೆಂಬ ಭದ್ರತೆಯಲ್ಲಿನ ವ್ಯವಹರಣೆಯಲ್ಲಿ ಸರಿಪಡಿಸಲು ಸಾಧ್ಯವಿಲ್ಲ. ಆದುದರಿಂದ, ಪ್ರಾಸಿಕ್ಯೂಷನ್‌ನ ಮೊಕದ್ದಮೆಯನ್ನು ಪ್ರತ್ಯೇಕ ಸಾಕ್ಷ್ಯವು ಬೆಂಬಲಿಸದಿರುವಾಗ, ಪ್ರಾಸಿಕ್ಯೂಷ್‌ನ್ನು ಆ ಎಲ್ಲಾ ಯುಕ್ತ ಸಂದೇಹದ ಮೇಲೆ ರುಜುವಾತು ಪಡಿಸಿದೆಯೆಂದು ಅಭಿಪ್ರಾಯಪಟ್ಟಿದ್ದರೆ, ಇದು ನ್ಯಾಯದ ಗಂಭೀರ ವಿಫಲತೆಗೆ ಕಾರಣವಾಗುತ್ತದೆ. ಮಾನ್ಯ ವಕೀಲರು ಅಪೀಲಿನಲ್ಲಿ ನಿರೂಪಿಸಲಾದ ಈ ಆಧಾರಗಳನ್ನು ಇಲ್ಲಿ ಮಂಡಿಸಿದ್ದಾರೆ.

8. ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್‌ರವರು, ಪರಿಶೀಲಿಸಲಾದ, ಸಾಕ್ಷಿದಾರರು ಪ್ರಾಸಿಕ್ಯೂಷನ್‌ನ ಮೊಕದ್ದಮೆಯನ್ನು ಬೆಂಬಲಿಸಿಲ್ಲವೆಂಬುದು ಸತ್ಯವೆಂದು ಮತ್ತು ಪ್ರಾಸಿಕ್ಯೂಷನ್‌ನ ಸಂಪೂರ್ಣ ಮೊಕದ್ದಮೆ ಮೃತಳ ಮರಣಕಾಲೀನ ಹೇಳಿಕೆಯ ಮೇಲೆ ನಿಂತಿದೆಯೆಂದು ನಿವೇದಿಸಿದ್ದಾರೆ. ಮರಣಕಾಲೀನ ಹೇಳಿಕೆಗೆ ಯುಕ್ತ ಪ್ರಾಮುಖ್ಯತೆಯನ್ನು ನೀಡಲೇಬೇಕಾಗಿದ್ದು, ಮರಣಕಾಲೀನ ಹೇಳಿಕೆಯು ಸಿಂಧುವಾಗಿರಬಹುದಾದಂಥ ಪ್ರಕರಣಗಳಲ್ಲಿ ಮತ್ತು ದೃಷ್ಟಾಂತಗಳಲ್ಲಿ ವೈದ್ಯಕೀಯ

ಪ್ರಾಕ್ಟೀಷನರು, ಮೃತನು ಸರಿಯಾದ ಮನಸ್ಥಿತಿಯಲ್ಲಿ ಹೇಳಿಕೆಯನ್ನು ನೀಡಿದ್ದನೆಂದು ಯುಕ್ತವಾಗಿ ಪ್ರಮಾಣೀಕರಿಸಿದ್ದರೆ ಮಾತ್ರ ಅದನ್ನು ಅವಲಂಬಿಸಬಹುದಾಗಿದ್ದು, ಮರಣೋನ್ಮುಖ ಹೇಳಿಕೆಯ ಅಂಥ ಪ್ರಮಾಣೀಕರಣವಾದ ನಂತರವಷ್ಟೇ ದಾಖಲಿಸಬೇಕಾಗಿರುವುದು ಕಾನೂನಿನ ಸರಿಯಾದ ಸ್ಥಿತಿಯಲ್ಲ. ಅವನು, ***ಗುಲ್ಜಾರಿ ಲಾಲ್ –ವಿರುದ್ಧ– ಹರಿಯಾಣ ರಾಜ್ಯ*** [1], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಪನ್ನು ಅವಲಂಬಿಸಿದ್ದು, ಇದು, ***ಲಕ್ಷ್ಮಣ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ***[2], ಸಾಂವಿಧಾನಿಕ ಪೀಠದ ತೀರ್ಪನ್ನು ಒಳಗೊಂಡಂತೆ ತೀರ್ಪು ಜನ್ಯ ಕಾನೂನನ್ನು ಪುನರ್ ಪರಿಶೀಲಿಸಿದೆ ಮತ್ತು ಯಾವ ನಮೂನೆ ಮತ್ತು ರೀತಿಯಲ್ಲಿ ಮರಣಕಾಲೀನ ಹೇಳಿಕೆಯನ್ನು ದಾಖಲಿಸಬೇಕಾಗುತ್ತದೆ ಎಂಬ ಬಗ್ಗೆ ಕಠಿಣ ಮತ್ತು ಬಿಗಿಯಾದ ಕಾನೂನಿಲ್ಲವೆಂದು ಆಗ್ರಹಿಸಿದೆ. ಯಾವ ಸನ್ನಿವೇಶಗಳಲ್ಲಿ ಮರಣಕಾಲೀನ ಹೇಳಿಕೆಯನ್ನು ದಾಖಲಿಸಲಾಗಿದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ಮನವರಿಕೆಯಾದರೆ ಅಷ್ಟು ಸಾಕಾಗುತ್ತದೆ ಮತ್ತು ಮತ್ತೊಂದು ಕಡೆ ಪ್ರಸ್ತುತ ಪ್ರಕರಣದಲ್ಲಿ, ಪ್ರಾಸಾ.16 ತನಿಖಾಧಿಕಾರಿ ಮತ್ತು ಮೃತರಿಗೆ ಚಿಕಿತ್ಸೆ ನೀಡಿದ್ದ ಪ್ರಾಸಾ.14–ಮೆಡಿಕಲ್ ಪ್ರಾಕ್ಟೀಷನರ್ ಮತ್ತು ಮೃತರ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಿದ್ದ ಪ್ರಾಸಾ.19 ಮೆಡಿಕಲ್ ಆಫೀಸರ್‌ನು ಮರಣಕಾಲೀನ ಹೇಳಿಕೆಯನ್ನು ಬೆಂಬಲಿಸುವಲ್ಲಿ ಸಾಕ್ಷ್ಯವನ್ನು ನೀಡುವಲ್ಲಿ ಅಪೀಲುದಾರನ ವಿರುದ್ಧ ಯಾವುದೇ ವೈಯಕ್ತಿಕ ಹಗೆತನ ಅಥವಾ ದ್ವೇಷವನ್ನು ಹೊಂದಿರಲಿಲ್ಲವೆಂಬುದು ಅಪೀಲುದಾರನ ವಾದವಾಗಿರುವುದಿಲ್ಲ. ಆದುದರಿಂದ, ಇದನ್ನು ನಿಷ್ಪಕ್ಷಪಾತವಾಗಿ ಹೇಳಿದಲ್ಲಿ ಮೃತರ ಹೇಳಿಕೆಯನ್ನು ದಾಖಲಿಸಿರುವ ಬಗ್ಗೆ ಯಾವುದೇ ಸಂದೇಹವನ್ನು ಅಥವಾ ಯಾವುದೇ ಸಂಶಯವನ್ನು ವ್ಯಕ್ತಪಡಿಸಲಾಗುವುದಿಲ್ಲ. ಆದುದರಿಂದ, ಅಧೀನ ನ್ಯಾಯಾಲಯದ ತೀರ್ಪಿನಲ್ಲಿ ಯಾವುದೇ ದುರ್ಬಲತೆ ಇಲ್ಲವೆಂದು ವಾದಿಸಲಾಗಿದ್ದು, ಮೃತಳು ತನ್ನ ಮರಣಶಯ್ಯೆಯಿಂದ ಮಾತನಾಡಿರುವುದನ್ನು ಈ ಸ್ವರೂಪದ ಪ್ರಕರಣದಲ್ಲಿ ಸಿದ್ಧವಾಗಿ ಒಪ್ಪಿಕೊಳ್ಳಬೇಕಾಗಬಹುದು. ಆದುದರಿಂದ ಅಪರಾಧ ನಿರ್ಣಯ ಮತ್ತು ಅಧೀನ ನ್ಯಾಯಾಲಯವು ವಿಧಿಸಿದ ಶಿಕ್ಷೆಯನ್ನು ನೀಡುವುದನ್ನು ದೃಢೀಕರಿಸಬಹುದಾಗಿದೆಯೆಂದು ನಿವೇದಿಸಿದ್ದಾರೆ.

1. (2014)4 ಎಸ್‌ಸಿಸಿ 583) 2. (2002)6 ಎಸ್‌ಸಿಸಿ 710

9. ಮೇಲಿನ ಪರಸ್ಪರ ವಿರೋಧದ ವಾದಗಳನ್ನು ನೀಡಲಾಗಿದ್ದು, ***ಲಕ್ಷ್ಮಣ್ -ವಿರುದ್ಧ- ಮಹಾರಾಷ್ಟ್ರ ರಾಜ್ಯ***ದ (ಮೇಲಿನ) ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯವು, ಮರಣೋನ್ಮುಖ ಹೇಳಿಕೆಯನ್ನು ಅಗತ್ಯವಾಗಿ ಮ್ಯಾಜಿಸ್ಟ್ರೇಟರು ಮಾಡಲೇಬೇಕು ಎನ್ನುವುದು ಕಾನೂನಿನಲ್ಲಿ ಅಗತ್ಯವಾಗಿಲ್ಲವೆಂದು ಅಭಿಪ್ರಾಯಪಟ್ಟಿದೆ, ಮತ್ತು ಅಂಥ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರು ದಾಖಲಿಸುವಾಗ, ಅಂಥ ದಾಖಲಾತಿಗೆ ನಿಯಮಿಸಲಾದ ಯಾವುದೇ ನಿರ್ದಿಷ್ಟಪಡಿಸಿದ ಶಾಸನಬದ್ಧ ನಮೂನೆಯಿರುವುದಿಲ್ಲ. ತತ್ಪರಿಣಾಮವಾಗಿ ಅಂಥ ಹೇಳಿಕೆಗೆ ಯಾವ ಸಾಕ್ಷಿಯ ವಾದ ಮೌಲ್ಯ ಅಥವಾ ಪ್ರಾಮುಖ್ಯತೆಯನ್ನು ಅಗತ್ಯವಾಗಿ ಸೇರಿಸಬೇಕಾಗುತ್ತದೆ ಎಂಬುದು ಪ್ರತಿಯೊಂದು ನಿರ್ದಿಷ್ಟ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಆಧರಿಸಿರುತ್ತವೆ. ಮರಣೋನ್ಮುಖ ಹೇಳಿಕೆಯನ್ನು ದಾಖಲಿಸುವ ವ್ಯಕ್ತಿಯು, ಮೃತನು, ಸರಿಯಾದ ಮನಸ್ಥಿತಿಯನ್ನು ಹೊಂದಿದ್ದನೆಂಬುದನ್ನು ಮನವರಿಕೆ ಮಾಡಿಕೊಡಲೇಬೇಕು ಎಂಬುದನ್ನು ಅವಶ್ಯವಾಗಿ ಅಗತ್ಯಪಡಿಸಲಾಗಿದೆ. ವೈದ್ಯರು ಪರೀಕ್ಷೆಯನ್ನು ಮಾಡದಿದ್ದರೂ ಕೂಡ ಘೋಷಿತನು ವಿವರಣೆಯನ್ನು ಮಾಡಲು ಸೂಕ್ತನಾಗಿರುವನು ಎಂಬುದನ್ನು ಮ್ಯಾಜಿಸ್ಟ್ರೇಟರ ಸಾಕ್ಷ್ಯವು ರುಜುವಾತುಪಡಿಸಿದಲ್ಲಿ, ಹೇಳಿಕೆಯ ಅನುಸಾರ ಕಾರ್ಯನಿರ್ವಹಿಸಬಹುದು, ನ್ಯಾಯಾಲಯ ಒದಗಿಸಿರುವುದು ಅಂತಿಮವಾಗಿ, ಅದು ಸ್ವಯಂ ಮತ್ತು ಸತ್ಯ ಪೂರ್ಣವಾಗಿದೆಯೆಂದು ಅಭಿಪ್ರಾಯಪಟ್ಟಿದೆ. ವೈದ್ಯರ ಪ್ರಮಾಣೀಕರಣವು, ಅವಶ್ಯವಾಗಿ ಎಚ್ಚರಿಕೆಯ ನಿಯಮವಾಗಿರುತ್ತದೆ ಮತ್ತು ಆದುದರಿಂದ ಹೇಳಿಕೆಯ ಸ್ವ-ಇಚ್ಛೆಯ ಮತ್ತು ಸತ್ಯ ಪೂರ್ಣವಾದ ಸ್ವಭಾವವನ್ನು ಅನ್ಯಥಾವಾಗಿಯೂ ರುಜುವಾತು ಪಡಿಸಬಹುದಾಗಿದೆ. ಸರ್ವೋಚ್ಛ ನ್ಯಾಯಾಲಯದ ಸಾಂವಿಧಾನಿಕ ಪೀಠ ಈ ಸೂತ್ರವನ್ನು ನೀಡಲಾಗಿದ್ದು, ಇದನ್ನು ***ಗುಲ್ಜಾರಿ ಲಾಲ್ -ವಿರುದ್ಧ- ಹರಿಯಾಣ ರಾಜ್ಯ***ವು ಒಳಗೊಂಡಂತೆ ನಂತರ ತೀರ್ಪುಗಳಲ್ಲಿ ಸುಸಂಗತವಾಗಿ ಅನುಸರಿಸಲಾಗಿದೆ.

10. ಪ್ರಸ್ತುತ ಪ್ರಕರಣದಲ್ಲಿ ನಿಶಾನೆ ಪಿ.13 ಎಂದು ಗುರುತು ಮಾಡಿರುವ ಮರಣಕಾಲೀನ ಹೇಳಿಕೆಯನ್ನು ಸಿದ್ಧ ಉಲ್ಲೇಖಕ್ಕಾಗಿ ಈ ಮುಂದಿನಂತೆ ಉದ್ಧೃತಗೊಳಿಸಲಾಗಿದೆ. ಇದನ್ನು ಈ ಕೆಳಗಿನಂತೆ ಓದಲಾಗಿದೆ:

ನಾನು ಗಾಂದ್ರಾಬಾಯಿ ಗಂ. ಸಿದ್ದಾರಾಮ ಬಡಿಗೇರ ಜಾತಿ: ಹಿಂದು ಪಾಂಚಾಳ ವಯ: 38 ವರ್ಷ ಉದ್ಯೋಗಃ ಕೂಲಿ ಕೆಲಸ ಸಾ: ನಿಂಬಾಳ ಬಿ.ಕೆ. ಹೇಳಿ ಬರೆಸಿದ್ದು.

ನಾನು ನಿಂಬಾಳ ಬಿ.ಕೆ. ಗ್ರಾಮದ ರಹವಾಸಿ ಇರುತ್ತೇನೆ. ಈಗ 15–16 ವರ್ಷಗಳ ಹಿಂದೆ ನನ್ನ ಗಂಡನು ನನ್ನ ನಡತೆಯ ಬಗ್ಗೆ ಸಂಶಯ ತಾಳಿ ನನಗೆ ಬಿಟ್ಟಿದ್ದು ಅದೆ. ನನಗೆ 2 ಹೆಣ್ಣು 1 ಗಂಡಸ ಮಗ ಇದ್ದು, ಅವು ನನ್ನ ಗಂಡನ ಕಡೆಗೆ ಇದ್ದು, ನನ್ನ ಎರಡು ಹೆಣ್ಣು ಮಕ್ಕಳು ಮೃತ ಆಗಿದ್ದು ಅದೆ. ಒಬ್ಬ ಗಂಡಸ ಮಗ ತನ್ನ ತಂದೆಯ ಸಂಗಡ ಇರುತ್ತಾನೆ. ನಾನು ನಿಂಬಾಳ ಬಿ.ಕೆ. ಗ್ರಾಮದ ಧರೆಪ್ಪಾ ಬಿರಾದಾರ ಇವನ ಕೂಡ ಅನೈತಿಕ ಸಂಬಂಧ ಮಾಡಿ ಅವನ ಸೊಬಲೆಯಲ್ಲಿ ಇದ್ದೇನು. ಈಗ ಒಂದು ವರ್ಷದ ಹಿಂದೆ ಧರೆಪ್ಪ ಬಿರಾದಾರ ಇವನು ಮೃತ ಆಗುವುದರಿಂದಾ ನಾನು ಈಗ ಒಂದು ವರ್ಷದ (ಸ್ವಷ್ಟವಾಗಿಲ್ಲ) ನಮ್ಮೂರ ನಾಗಪ್ಪಾ ಬಾಳಪ್ಪಾ ವಡ್ಡರ ಇವನ ಸೊಬಲೆಯಲ್ಲಿ ಇರುತ್ತೇನೆ. ಸದರಿಯವನು ನನ್ನ ನಡತೆಯ ಮೇಲೆ ಸಂಶಯ ತಾಳಿದ್ದು ಅದೆ.

ಮೊನ್ನೆ ಬುಧವಾರ ದಿವಸ ಮಧ್ಯಾಹ್ನ ನಮ್ಮೂರ ಲಾಲಸಾಬ ಮಹಿಬೂಬಸಾಬ ಮುಲ್ಲಾ ಇವನು ಬಂದು ಕೂಲಿ ಕೆಲಸಕ್ಕೆ ಬರಲಿಕ್ಕೆ ಹೇಳಿ ಹೇಳಿದನು. ಲಾಲಸಾಬ ಇವನು ನಮ್ಮ ಮನೆಗೆ ಬಂದು ಹೋದ ಸಂಗತಿ ನಾಗಪ್ಪಾ ವಡ್ಡರ ಇವನಿಗೆ ತಿಳಿಯಿತು. ಸದರಿಯವನು ನಿನ್ನೆ ದಿವಸ ಮುಂಜಾನೆ ಮತ್ತು ಮಧ್ಯಾಹ್ನಕ್ಕೆ ನನ್ನ ಕೂಡ ಜಗಳಾ ತೆಗೆದು ರಂಡಿ ನೀನು ಲಾಲಸಾಬ ಇವನ ಕೂಡ ಅನೈತಿಕ ಸಂಬಂಧ ಮಾಡಿದಿ ಲಾಲಸಾಬ ಇವನು ಮನೆಗೆ ಯಾಕ ಬಂದಿದ್ದ ನಿನಗೆ ಕೊಡ್ಲಿಯಿಂದಾ ಕಡಿದು ಖಲಾಸ ಮಾಡುತ್ತೇನೆ ಅಂತಾ ಬೈದಾಡಲಿಕ್ಕೆ ಹತ್ತಿದನು. ನಿನ್ನೆ ರಾತ್ರಿ 9 ಗಂಟೆಗೆ ನಾಗಪ್ಪಾ ಇವನು ಪುನಃ ನನ್ನ ಕೂಡ ಜಗಳಾ

ತೆಗೆದು ರಂಡಿ ನಿನಗೆ ಜೀವಂತ ಬಿಡುವುದಿಲ್ಲ ಅಂತಾ ಜಗಳಾ ತೆಗೆದು ನನಗೆ ಕೊಲೆ ಮಾಡಲು ಇರಾದೆಯಿಂದಾ ನನಗೆ ನಮ್ಮ ಮನೆಯಲ್ಲಿಯ ಗಾಸಲೇಟ ಎಣ್ಣಿಯನ್ನು ನನ್ನ ಮೈಮೇಲೆ ಸುರಿದು ಕಡ್ಡಿ ಕೊರಿದು ಬೆಂಕಿ ಹಚ್ಚಿದನು. ನಾನು ಚಿರಾಡಿದ್ದು, ಅಲ್ಲಿ ಇದ್ದ ಸಿದ್ದಪ್ಪ ಬಡದಾಳ ಮಾಸ್ತರ, ರಾವುತಪ್ಪಾ ಸಾಲೆಗಾಂವ ಮತ್ತು ಕಾಶಿಮ ನಾಗಠಾಣ ನೋಡಿ ಬೆಂಕಿ ಆರಿಸಿದರು. ನನ್ನ ಮುಖಕ್ಕೆ, ಕುತ್ತಿಗೆಗೆ, ಬೆನ್ನಿಗೆ, ಕೈ–ಕಾಲಿಗೆ ಸುಟ್ಟಗಾಯಗಳು ಆಗಿದ್ದು ಅದೆ. ಈ ದಿವಸ ನನಗೆ ಉಪಚಾರ ಕುರಿತು ನಮ್ಮೂರ ಬಾಬುಗೌಡಪ್ಪ ಬಿರಾದಾರ, ನಬಿ ಇಮಾಮಸಾಬ ಮುಲ್ಲ ಇವರು ಹೊತ್ತು ದವಾಖಾನೆಗೆ ತಂದಿದ್ದು ಇರುತ್ತದೆ.

ಮೇಲೆ ನಮೂದ ಮಾಡಿದ ನಾಗಪ್ಪ ಬಾಶಪ್ಪ ವಡ್ಡರ ಇವನು ನನ್ನ ನಡತೆಯ ಬಗ್ಗೆ ಸಂಶಯ ತಾಳಿ ಲಾಲಸಾಬ ಇವನು ಮನೆಗೆ ಯಾಕ ಬಂದಿದ್ದಾ ಅಂತಾ ಜಗಳಾ ತೆಗೆದು ನನಗೆ ಕೊಲೆ ಮಾಡುವ ಇರಾದೆಯಿಂದ ಮೈ ಮೇಲೆ ಗಾಸಲೇಟ ಎಣ್ಣಿ ಸುರಿದು ಕಡ್ಡಿ ಕೊರೆದು ಬೆಂಕಿ ಹಚ್ಚಿ ಸುಟ್ಟು, ಕೊಲೆ ಮಾಡಲು ಪ್ರಯತ್ನ ಮಾಡಿದ್ದು ಸದರಿಯವನ ಮೇಲೆ ನನ್ನದು ಫಿರ್ಯಾದಿ ಇರುತ್ತದೆ.

ನನ್ನ ಸಮಕ್ಷಮ
ಓ.ಹೆ.ಕೆ. ಸರಿ ಇದೆ
ಸಹಿ
ಪಿಎಸ್ಐ ಹೋರ್ತಿ

1) ಹೆ.ಗು.
ಗಾಂದ್ರಾಬಾಯಿ ಗಂ.
ಸಿದ್ದಾರಾಮ ಬಡಿಗೇರ
ಇವಳದು ಅದೆ

ಸಹಿ/–
ಆರೋಗ್ಯ ವೈದ್ಯಕೀಯ ಅಧಿಕಾರಿ
ಪ್ರಾಥಮಿಕ ಆರೋಗ್ಯ ಕೇಂದ್ರ,
ಹೊರ್ತಿ ತಾಲ್ಲೂಕು: ಇಂಡಿ.

11. ಮರಣೋನ್ಮುಖ ಹೇಳಿಕೆಯನ್ನು ಸ್ಥೂಲವಾಗಿ ಇಂಗ್ಲಿಷಿಗೆ ಭಾಷಾಂತರಿಸಿದ್ದು, ಅದು ಹೀಗಿರುತ್ತದೆ.

> “ನಾನು ಗಾಂದ್ರಾಬಾಯಿ ಗಂ. ಸಿದ್ದರಾಮ ಬಡಿಗೇರ ಜಾತಿ: ಹಿಂದು ವಯ: 38 ವರ್ಷಗಳು ಉದ್ಯೋಗ: ಕೂಲಿ ಕೆಲಸ ಸಾ: ನಿಂಬಾಳ ಬಿ.ಕೆ. ಹೇಳಿ ಬರೆಸಿದ್ದು:
>
> ನಾನು ನಿಂಬಾಳ ಬಿ.ಕೆ. ಗ್ರಾಮದ ನಿವಾಸಿ ಇರುತ್ತೇನೆ. ಈಗ 15–16 ವರ್ಷಗಳ ಹಿಂದೆ ನನ್ನ ಗಂಡನು ನನ್ನ ನಡತೆಯ ಬಗ್ಗೆ ಸಂಶಯ ತಾಳಿ ನನಗೆ ಬಿಟ್ಟಿದ್ದು ಅದೆ. ನನಗೆ 2 ಹೆಣ್ಣು 1 ಗಂಡನ ಮಗ ಇದ್ದು, ಅವು ನನ್ನ ಗಂಡನ ಕಡೆಗೆ ಇದ್ದು, ನನ್ನ ಎರಡು ಹೆಣ್ಣು ಮಕ್ಕಳು ಮೃತ ಆಗಿದ್ದು ಅದೆ. ಒಬ್ಬ ಗಂಡಸ ಮಗಳು ತನ್ನ ತಂದೆಯ ಸಂಗಡ ಇರುತ್ತಾನೆ. ನಾನು ನಿಂಬಳ ಬಿ.ಕೆ. ಗ್ರಾಮದ ಧರೆಪ್ಪಾ ಬಿರಾದಾರ ಇವನ ಕೂಡ ಅನೈತಿಕ ಸಂಬಂಧ ಮಾಡಿ ಅವನ ಸೊಬಲೆಯಲ್ಲಿ ಇದ್ದೇನು. ಈಗ ಒಂದು ವರ್ಷದ ಹಿಂದೆ ಧರೆಪ್ಪಾ ಬಿರಾದಾರ ಇವನು ಮೃತ ಆಗುವುದರಿಂದಾ ನಾನು ಈಗ ಒಂದು ವರ್ಷದ (ಸ್ವಷ್ಟವಾಗಿಲ್ಲ) ನಮ್ಮೂರ ನಾಗಪ್ಪಾ ಬಾಳಪ್ಪಾ ವಡ್ಡರ ಇವನ ಸೊಬಲೆಯಲ್ಲಿ ಇರುತ್ತೇನೆ. ಸದರಿಯವನು ನನ್ನ ನಡತೆಯ ಮೇಲೆ ಸಂಶಯ ತಾಳಿದ್ದು ಅದೆ.
>
> ಮೊನ್ನೆ ಬುಧವಾರ ದಿವಸ ಮಧ್ಯಾಹ್ನ ನಮ್ಮೂರ ಲಾಲಸಾಬ ಮಹಿಬೂಬ ಸಾಬ ಮುಲ್ಲಾ ಇವನು ಬಂದು ಕೂಲಿ ಕೆಲಸಕ್ಕೆ ಬರಲಿಕ್ಕೆ ಹೇಳಿ ಹೇಳಿದನು. ಇವನು ನಮ್ಮ ಮನೆಗೆ ಬಂದು

ಹೋದ ಸಂಗತಿ ನಾಗಪ್ಪಾ ವಡ್ಡರ ಇವನಿಗೆ ತಿಳಿಯಿತು. ಸದರಿಯವರು ನಿನ್ನೆ ದಿವಸ ಮುಂಜಾನೆ ಮತ್ತು ಮಧ್ಯಾಹ್ನಕ್ಕೆ ನನ್ನ ಕೂಡ ಜಗಳಾ ತೆಗೆದು ರಂಡಿ ನೀನು ಲಾಲ ಸಾಬ ಇವನ ಕೂಡ ಅನೈತಿಕ ಸಂಬಂಧ ಮಾಡಿದಿ ಲಾಲ ಸಾಬ ಇವನು ಮನೆಗೆ ಯಾಕ ಬಂದಿದ್ದ ನಿನಗೆ ಕೊಡ್ಲಿಯಿಂದಾ ಕಡಿದು ಖಲಾಸ ಮಾಡುತ್ತೇನೆ ಅಂತ ಬೈದಾಡಲಿಕ್ಕೆ ಹತ್ತಿದನು. ನಿನ್ನೆ ರಾತ್ರಿ 9 ಗಂಟೆಗೆ ನಾಗಪ್ಪಾ ಇವನು ಪುನಃ ನನ್ನ ಕೂಡ ಜಗಳಾ ತೆಗೆದು ರಂಡಿ ನಿನಗೆ ಜೀವಂತ ಬಿಡುವುದಿಲ್ಲ ಅಂತಾ ಜಗಳಾ ತೆಗೆದು ನನಗೆ ಕೊಲೆ ಮಾಡಲು ಇರಾದೆಯಿಂದಾ ನನಗೆ ನಮ್ಮ ಮನೆಯಲ್ಲಿಯ ಗಾಸಲೇಟ ಎಣ್ಣೆಯನ್ನು ನನ್ನ ಮೈಮೇಲೆ ಸುರಿದು ಕಡ್ಡಿ ಕೊರಿದು ಬೆಂಕಿ ಹಚ್ಚಿದನು. ನಾನು ಚಿರಾಡಿದ್ದು, ಅಲ್ಲಿ ಇದ್ದ ಸಿದ್ದಪ್ಪ ಬಡಿದಾಳ ಮಾಸ್ತರ, ರಾವುತಪ್ಪಾ ಸಾಲೆಗಾಂವ ಮತ್ತು ರಾಶಿಮ ನಾಗರಾಜ ನೋಡಿ ಬೆಂಕಿ ಆರಿಸಿದರು. ನನ್ನ ಮುಖಕ್ಕೆ ಕುತ್ತಿಗೆಗೆ ಬೆನ್ನಿಗೆ ಕೈ-ಕಾಲಿಗೆ ಸುಟ್ಟಗಾಯಗಳು ಆಗಿದ್ದು ಇದೆ. ಈ ದಿವಸ ನನಗೆ ಉಪಚಾರ ಕುರಿತು ನಮ್ಮೂರ ಬಾಬು ಗೌಡಪ್ಪ ಬಿರಾದಾರ ನಬಿ ಇಮಾಮ ಸಾಬ ಮುಲ್ಲಾ ಇವರು ಹೊತ್ತು ದವಾಖಾನೆಗೆ ತಂಗಿದ್ದು ಇರುತ್ತದೆ.

ಮೇಲೆ ನಮೂದ ಮಾಡಿದ ನಾಗಪ್ಪ ಬಾಶಪ್ಪ ವಡ್ಡರ ಇವನು ನನ್ನ ನಡತೆಯ ಬಗ್ಗೆ ಸಂಶಯ ತಾಳಿ ಲಾಲ ಸಾಬ ಇವನು ಮನೆಗೆ ಯಾಕ ಬಂದಿದ್ದಾ ಅಂತಾ ಜಗಳಾ ತೆಗೆದು ನನಗೆ ಕೊಲೆ ಮಾಡುವ ಇರಾದೆಯಿಂದ ಮೇಲೆ ಗಾಸಲೇಟ ಎಣ್ಣೆ ಸುರಿದು ಕಡ್ಡಿ ಕೊರೆದು ಬೆಂಕಿ ಹಚ್ಚಿ ಸುಟ್ಟು ಕೊಲೆ ಮಾಡಲು ಪ್ರಯತ್ನ ಮಾಡಿದ್ದು, ಸದರಿಯವನ ಮೇಲೆ ನನ್ನದು ಪಿರ್ಯಾದಿ ಇರುತ್ತದೆ.

12. ಸದರಿ ಮರಣೋನ್ಮುಖ ಹೇಳಿಕೆಯು, ಗಂದ್ರಾಬಾಯಿಯ ಎಡ ಹೆಬ್ಬೆಟ್ಟಿನ ಗುರುತನ್ನು ಹೊಂದಿದ್ದು, ತನಿಖಾಧಿಕಾರಿ, ವೈದ್ಯಕೀಯ ಅಧಿಕಾರಿ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಹೊರಟಿ ಇವರ ಸಹಿಗಳನ್ನು ಹೊಂದಿರುತ್ತದೆ.

13. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ಪ್ರಕಾರ ಇದರಲ್ಲಿ ವ್ಯತ್ಯಾಸವಿದ್ದು, ಅಸಂಗತತೆಯಿದ್ದು, ಇದನ್ನು ಹೊಂದಾಣಿಕೆ ಮಾಡಲಾಗುವುದಿಲ್ಲ, ಇದು ಸಾಕ್ಷ್ಯವೂ ಕೂಡ ಆಗಿರುವುದಿಲ್ಲ. ಅದರಲ್ಲಿ ಚಿಕಿತ್ಸೆಯನ್ನು ನೀಡಿದ್ದ ಮೆಡಿಕಲ್ ಪ್ರಾಕ್ಟೀಷನರ್‌ನು, ಇಡೀ ದೇಹಕ್ಕೆ ಶೇಕಡಾ 80 ರಷ್ಟು ಸುಟ್ಟಗಾಯಗಳಾಗಿವೆಯೆಂದು ನಿರ್ಧರಿಸಿರುವುದರಿಂದ, ಪ್ರಾಸಾ.19 ಇದು ಶೇಕಡಾ 95 ರಷ್ಟು ಇರಬಹುದೆಂದು ತಿಳಿಸಿದ್ದಾರೆ. ಅಂತಿಮವಾಗಿ ಮೃತರು ಮರಣ ಅಪ್ಪುವಾಗ ಸುಟ್ಟಗಾಯಗಳ ಶೇಕಡಾವಾರಿನಲ್ಲಿ ಆಗಿರುವ ವ್ಯತ್ಯಾಸವು ಚಿಕ್ಕ ಪರಿಣಾಮವಾಗಿದೆ.

14. ಅಧೀನ ನ್ಯಾಯಾಲಯವು, ಮರಣೋನ್ಮುಖ ಹೇಳಿಕೆಯನ್ನು ನೀಡುತ್ತಿರುವಾಗ, ಮೃತಳು ಉತ್ತಮ ಮನಸ್ಥಿತಿಯಲ್ಲಿದ್ದಳೆಂಬುದನ್ನು ಪ್ರಮಾಣೀಕರಣದ ಮೂಲಕ ಇದನ್ನು ಮೊದಲು ಸೂಚಿಸಿಲ್ಲದಿದ್ದಾಗ ಮರಣಕಾಲೀನ ಹೇಳಿಕೆಯನ್ನು ಅವಲಂಬಿಸಿರುವುದು ನ್ಯಾಯಸಮ್ಮತವಾಗಿದೆಯೇ ಎಂದು ನಾವು ತಿಳಿಸಬೇಕಾಗಿರುವುದನ್ನು ಅಗತ್ಯಪಡಿಸುವುದು ಮಾತ್ರ ವಿವಾದಾಂಶವಾಗಿದೆ. **ಲಕ್ಷ್ಮಣ್**ರವರ ಪ್ರಕರಣದಲ್ಲಿ (ಮೇಲಿನ) ಸಾಂವಿಧಾನಿಕ ಪೀಠವು ವಿಧಿಸಲಾದ ಮಾರ್ಗಸೂಚಿಗಳನ್ನು ನೀಡಿದ್ದು, ಪ್ರಕರಣದ ಸನ್ನಿವೇಶವನ್ನು ನೀಡಿದ ಮರಣಕಾಲೀನ ಹೇಳಿಕೆಯ ನೈಜತೆಯ ಬಗ್ಗೆ ನಮಗೆ ಮನವರಿಕೆಯಾಗಿರುತ್ತದೆ. ಆದುದರಿಂದ, ಮರಣೋನ್ಮುಖ ಹೇಳಿಕೆಯನ್ನು ಅಂಗೀಕರಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯದಿಂದ ಯಾವುದೇ ಅಸ್ಥಿರತೆ ಅಥವಾ ಅಕ್ರಮ ನಡೆದಿರುವುದಿಲ್ಲ. ಈ ಅಪೀಲಿನಲ್ಲಿ ಯಾವುದೇ ಹುರುಳಿರುವುದಿಲ್ಲ. ಇದನ್ನು ವಜಾಗೊಳಿಸಲಾಗಿದೆ. ಅಪರಾಧ ನಿರ್ಣಯ ಮತ್ತು ಅಧಿವಿಚಾರಣಾ ನ್ಯಾಯಾಲಯವು ವಿಧಿಸಿದ ಶಿಕ್ಷೆಯನ್ನು ದೃಢೀಕರಿಸಲಾಗಿದೆ.